ದಿವಾಣಿ ನ್ಯಾಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಿತ್ತೂರ

ದಿನಾಂಕಃ 03.08.2026 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಮ್ ಪಿ ವಿ ವಕೀಲರಿಂದಃ**

12. ಚೆನ್ನವ್ವ ಚನ್ನಬಸಪ್ಪಾ ಚಂದರಗಿ ಅವರು ದಾವಾ ಆಸ್ತಿಯ ಮಾಲೀಕರು ಎಂದರೆ ಸರಿ. ಸದರಿಯವರಿಗೆ ಶಂಕರ ಎನ್ನುವ ಒಬ್ಬ ಮಗ ಇದ್ದ ಎಂದರೆ ಸರಿ. ಸದರಿ ಶಂಕರಗೆ ಒಟ್ಟು ಏಳು ಜನ ಮಕ್ಕಳು. ಐದು ಜನ ಹೆಣ್ಣುಮಕ್ಕಳು, ಇಬ್ಬರೂ ಗಂಡು ಮಕ್ಕಳು. ಸದರಿ ಚೆನ್ನವ್ವ ಕೆಲವು ಆಸ್ತಿಗಳನ್ನು ನನ್ನ ಅಜ್ಜನಿಗೆ, ಕೆಲವು ಆಸ್ತಿಗಳನ್ನು 2 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾಳೆ ಎಂದರೆ ಗೊತ್ತಿಲ್ಲ. ನಾನು ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ಪಿವಿಸಿ ಸಂಖ್ಯೆ 1515 ರ ಖುಲ್ಲಾ ಜಾಗೆಯನ್ನು ಪ್ರತಿವಾದಿ ಸಂಖ್ಯೆ 3(ಸಿ) ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಸಂಖ್ಯೆ 3(ಡಿ) ಮತ್ತು (ಬಿ) ರವರಿಗೆ ತಲಾ ಒಂದು ಗುಂಟೆ ಬಿಟ್ಟುಕೊಡಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ ಸಂಖ್ಯೆ 3(ಇ) ರವರಿಗೆ ನಾಲ್ಕು ಗುಂಟೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರನ್ನು ವಂಶಾವಳಿಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ.

13. ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 324/2012 ರಲ್ಲಿ ನನ್ನ ತಂದೆ ನಮಗೆ ರೂ.2,89,000/- ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯವರು ರಿ.ಸಂ.153/2 ರ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಳ್ಳಲು ಪಾಲು ವಿಭಾಗ ಪತ್ರ ದಿನಾಂಕ 01.02.2013 ರನ್ನು ಸಲ್ಲಿಸಿದ್ದರು ಎಂದರೆ

ಸರಿಯಲ್ಲ. ಸದರಿ ಸಮಯದಲ್ಲಿ ತಹಶೀಲ್ದಾರವರು 45 ದಿನಗಳ ಕಾಲಾವಧಿಯನ್ನು ತಕರಾರು ಸಲ್ಲಿಸಲು ನೋಟಿಸ್ಸು ನೀಡಿದ್ದರು ಎಂದರೆ ಗೊತ್ತಿಲ್ಲ. ಐದು ಜನ ಹೆಣ್ಣುಮಕ್ಕಳು ನನ್ನ ತಂದೆಯ ಹೆಸರಿಗೆ ವರ್ಗಾವಣೆ ಮಾಡಲು ಒಪ್ಪಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಊರು ಬಿಟ್ಟಾಗ ಮೂರನೇ ತರಗತಿ ಓದುತ್ತಿದ್ದೆ. ನಂತರ ದಿನಗಳಲ್ಲಿ ನನ್ನ ತಂದೆಯನ್ನು ಭೇಟಿ ಮಾಡಿದ್ದೇನೆ. ಆಸ್ಪತ್ರೆಯಲ್ಲಿ ಭೇಟಿ ಮಾಡಿಲ್ಲ. ನನ್ನ ತಂದೆ ಗೊಂದಲಗೊಂಡು ವಿಷ ತೆಗೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿಯ ಕೆ ಎಲ್ ಇ ಆಸ್ಪತ್ರೆಗೆ ದಿನಾಂಕ 26.03.2004 ರಂದು ದಾಖಲು ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ಆಸ್ಪತ್ರೆಗೆ ನಾನಾಗಲೀ, ನನ್ನ ತಾಯಿಯಾಗಲೀ ನನ್ನ ತಂದೆಯನ್ನು ಮಾತನಾಡಿಸಿದ ಬಗ್ಗೆ ನನಗೆ ನೆನಪಿಲ್ಲ. ನನ್ನ ತಂದೆ ನೋಂದು 4 ನೇ ಪ್ರತಿವಾದಿ ಮಠಕ್ಕೆ 3 ಎಕರೆ ಆಸ್ತಿಯನ್ನು ಪ್ರಸಾದ ನಿಲಯಕ್ಕೆ ದಾನ ಪತ್ರದ ಮೂಲಕ ದಾನ ಮಾಡಿರುತ್ತಾರೆ ಎಂದರೆ ಸರಿ. ಸಭಾ ಭವನದ ಹೆಸರು ಶಂಕರ ಚಂದರಗಿ ಎಂದರೆ ಸರಿ. ವಿಪಿಸಿ ಸಂಖ್ಯೆ 1515 , 1516/ಬ ಚಿನ್ನಮ್ಮನಿಂದ ನೇರವಾಗಿ 2 ನೇ ಪ್ರತಿವಾದಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದು ಗೊತ್ತಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಜವಾದ ದಾಖಲೆಗಳನ್ನು ಮುಚ್ಚಿಟ್ಟು ಸುಳ್ಳು ವಂಶಾವಳಿಯನ್ನು ಸಲ್ಲಿಸಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕಿತ್ತೂರ.